ಕಾರ್ಯಕ್ರಮಗಳೂ ಆಗೆಲ್ಲ ನಡೆಯುತ್ತಿದ್ದವು. ಸ್ಪಿಕ್‌ಮೆಕೆಯಂತಹ ಸಂಸ್ಥೆಗಳು ಕಲೆಯ ಆಸ್ವಾದನೆಗೆ ಸಂಬಂಧಿಸಿದಂತೆ ಜನರಿಗೆ ಶಿಕ್ಷಣ ನೀಡುವ ಕೆಲಸ ಮಾಡುತ್ತಿದ್ದವು. ಆದರೆ ತೀರಾ ಇತ್ತೀಚೆಗಿನ ವರ್ಷಗಳಲ್ಲಿ ಸಭಿಕರ ಪ್ರತಿಕ್ರಿಯೆ ನೋಡಿದರೆ, ಕಲಾ ಆಸ್ವಾದನೆಯ ಬಗ್ಗೆ ಅವರಿಗಿರುವ ತಿಳಿವಳಿಕೆ ಎಂತಹುದಪ್ಪಾ ಎಂಬ ಪ್ರಶ್ನೆ ಆಗಾಗ ಮೂಡುತ್ತದೆ. ಹಿಂದೆಲ್ಲ ಮಾಧ್ಯಮವನ್ನು ಬಳಸಿಕೊಂಡು ಮುಂದುವರೆಯುವ ಕಲೆಯನ್ನು ಕಲಾವಿದರು ಅರಿತಿರಲಿಲ್ಲ. ಈಗ ನವ ಮಾಧ್ಯಮಗಳ ಬಳಕೆ ಮತ್ತು ಪ್ರಚಾರಕ್ಕೆ ಹೆಚ್ಚು ಆದ್ಯತೆ ಕೊಡಲಾಗುತ್ತದೆ.

ಎಂಟನೇ ಶತಮಾನಕ್ಕೂ ಮುನ್ನ ಭುವನೇಶ್ವರದಲ್ಲಿರುವ ಲಿಂಗರಾಜ ದೇವಸ್ಥಾನದ ಸುತ್ತಮುತ್ತ ಒಡಿಸ್ಸಿ ನೃತ್ಯ–ಕಲೆಯು ಪ್ರಚಲಿತವಿದ್ದು, ಅವೆಲ್ಲ ಶೈವ ಪಂಥವನ್ನು ಆಧರಿಸಿದ ಆರಾಧನೆಗಳಾಗಿದ್ದವು. ನಂತರದ ದಿನಗಳಲ್ಲಿ ವೈಷ್ಣವ ಪಂಥವು ವ್ಯಾಪಕಗೊಳ್ಳುತ್ತಿದ್ದಂತೆಯೇ ಪುರಿ ಜಗನ್ನಾಥ ದೇವಾಲಯದಲ್ಲಿ ಈ ಕಲೆಯು ಉತ್ತುಂಗಕ್ಕೆ ಹೋಯಿತು. ಗುರುಗಳಾದ ಕೇಳುಚರಣ್ ಮೊಹಪಾತ್ರ ಅವರು ಗೋಸ್ವಾಮಿ ಅವರ ಬಳಿ ನೃತ್ಯವನ್ನು ಕಲಿತಿದ್ದರೂ, ನಂತರ ಅವರು ಒಡಿಸ್ಸಿ ನೃತ್ಯದ ಏಳಿಗೆಗಾಗಿ ಶ್ರಮ ವಹಿಸಿ ಕೆಲಸ ಮಾಡಿದ್ದಾರೆ. ತಮ್ಮದೇ ಆದ ಶೈಲಿಯೊಂದನ್ನು ರೂಪಿಸಿದ್ದಾರೆ. ಒಡಿಸ್ಸಿಯ ಜನಪದ ರೂಪ ಗೊಟ್ಟಿಪುವಾ ಕಲಿತು, ನಟನೆಯನ್ನು ಕಲಿತು, ನಂತರ ಒಡಿಸ್ಸಿಯನ್ನು ಕಲಿತು, ಅವರು ಈ ನೃತ್ಯಪ್ರಕಾರದ ವಿಕಾಸಕ್ಕೆ ಕೊಡುಗೆ ನೀಡಿದ್ದಾರೆ. ಅವರು ಔಪಚಾರಿಕವಾಗಿ ಎರಡನೇ ತರಗತಿಯವರೆಗೆ ವಿದ್ಯಾಭ್ಯಾಸ ಪಡೆದಿದ್ದರೂ, ಸೌಂದರ್ಯಪ್ರಜ್ಞೆಯು ಅತ್ಯುನ್ನತ ಮಟ್ಟದಲ್ಲಿತ್ತು. ಕೊನಾರ್ಕದ ಸೂರ್ಯಮಂದಿರ ಮತ್ತು ಭುವನೇಶ್ವರದ ದೇವಾಲಯದಲ್ಲಿದ್ದ ಶಿಲ್ಪಕಲೆಯನ್ನು ಅಧ್ಯಯನ ಮಾಡಿ, ಅದರಿಂದ ನೃತ್ಯವನ್ನು ಪುನರ್‌ಸೃಷ್ಟಿ ಮಾಡಿದರು. ಶಿಲ್ಪ ಮಾದರಿಯ ದೇಹಪ್ರಸ್ತುತಿಗೆ ಆದ್ಯತೆ ಕೊಡುತ್ತಿದ್ದರು. ವಿದ್ವಾಂಸರು ಮತ್ತು ಕಲಾವಿದರಾದ ಕುಂಕುಮ್ ಮೊಹಾಂತಿ ಅವರ ಜೊತೆ ಸೇರಿ, ಒಡಿಸ್ಸಿ ರಿಸರ್ಚ್ ಸೆಂಟರ್‌ನಲ್ಲಿ ಮುಖ್ಯಗುರುಗಳಾಗಿ ಅವರು ಕಲಾ ವಲಯದ ವಿದ್ವಾಂಸರ ಜೊತೆಗೆ ನಿರಂತರ ಚರ್ಚೆ ನಡೆಸಿ ತಮ್ಮದೇ ಆದ ಶೈಲಿಯನ್ನು ರೂಪಿಸಿದರು. ಸಂಜುಕ್ತಾ ಪಾಣಿಗ್ರಹಿ ಅವರು ಗುರುಗಳ ಜೊತೆಗೆ ಕೆಲಸ ಮಾಡಲು ನಿಂತರು. ಪಕ್ವಾವಾಜ್ ಕಲಾವಿದರನ್ನೂ ಅವರು ತಿದ್ದಿ ತೀಡಿ, ಈ ನೃತ್ಯದ ವಿಕಾಸಕ್ಕೆ ಪೂರಕವಾಗುವಂತೆ ಮಾಡಿದರು. ಗುರು ದೇಬಪ್ರಸಾದ್ ಅವರು ಕಲಿಸುತ್ತಿದ್ದ ಒಡಿಸ್ಸಿಯ ಶೈಲಿಯೇ ಬೇರೆ. ಅದು ಶೈವಪಂಥವನ್ನು ಅನುಸರಿಸಿ ಬೆಳೆಯುತ್ತ ಬಂದಿದೆ.

**◆ ನೃತ್ಯ ಮತ್ತು ಪೇಂಟಿಂಗ್ ನಿಮ್ಮ ಪ್ರೀತಿಯ ವಿಷಯವಾಗಿವೆ. ಜೀವನದುದ್ದಕ್ಕೂ ಅವುಗಳೊಡನೆ ಅನುಸಂಧಾನ ನಡೆಸುತ್ತಲೇ ಬಂದಿದ್ದೀರಿ. ಚಿತ್ರಕಲೆಯ ಬಗ್ಗೆ ನಿಮ್ಮ ಅನಿಸಿಕೆಯೇನು?**

ಕಲೆಯ ಇತಿಹಾಸವನ್ನು ನಾನು ಕಲಿತದ್ದು ಬಹಳ ತಡವಾಗಿ. ಆಧುನಿಕ ಕಲಾಪ್ರಕಾರದ ಬಗ್ಗೆ ಅಪ್ಪನಿಗೆ ತುಂಬಾ ಆಸಕ್ತಿ ಇತ್ತು. ಅಪ್ಪ ಸ್ವತಃ ಬರೆಯುತ್ತಿದ್ದದ್ದು ಇಲ್ಲಸ್ಟ್ರೇಷನ್ ಮಾತ್ರ. ಅವರು ಮುಂಬೈಗೆ ತೆರಳುವಾಗ ಕೆ.ಕೆ. ಹೆಬ್ಬಾರ್ ಅವರ ಪರಿಚಯವಾಗಿತ್ತು. ಅವರ ಸ್ನೇಹ ಎಷ್ಟು ಗಾಢವಾಯಿತೆಂದರೆ, ಅಪ್ಪ ಮುಂಬೈಗೆ ತೆರಳಿದರೆ ಹೆಬ್ಬಾರರ ಮನೆಯಲ್ಲಿಯೇ ಉಳಿದುಕೊಳ್ಳುತ್ತಿದ್ದರು. ನಾನೂ ಮುಂಬೈಗೆ ಹೋದರೆ ಅವರ ಮನೆಯಲ್ಲಿಯೇ ಉಳಿಯುವುದು ವಾಡಿಕೆಯಾಗಿತ್ತು. ಅವರ ಸ್ಟುಡಿಯೊದಲ್ಲಿ ಕುಳಿತು ಅವರು ತಮ್ಮ ಕಲಾಕೃತಿಗಳ ಬಗ್ಗೆ ವಿವರಿಸುತ್ತಿದ್ದರು. ನಾನು ಕೂಡ ಅಲ್ಲಿ ಹೋದಾಗ, ಅವರು ಹೇಳುವುದನ್ನು ಗಮನವಿಟ್ಟು ಕೇಳುತ್ತಿದ್ದೆ. ಅವರ 'ಸಿಂಗಿಂಗ್ ಲೈನ್ಸ್' ಎಂಬ ರೇಖಾಚಿತ್ರಗಳ ಪುಸ್ತಕ ಎಷ್ಟೊಂದು ಸುಂದರವಾಗಿದೆ! ಹೆಬ್ಬಾರ್, ಹುಸೇನ್, ಆರಾ ಮತ್ತು ರಾಝಾ ಅವರು 1935ರಲ್ಲಿ ಆಧುನಿಕ ಕಲಾ ಚಳವಳಿ ಆರಂಭಿಸಿದ್ದು.

ಅಪ್ಪ ಅದಾಗಲೇ ಸಾಲ ಮಾಡಿ ಯುರೋಪ್‌ಗೆ ತೆರಳಿ ಅಲ್ಲಿನ ವಿವಿಧ ದೇಶಗಳಲ್ಲಿ ಪ್ರಸಿದ್ಧವಾಗಿದ್ದ ಕಲೆಯನ್ನು ಅಭ್ಯಾಸ ಮಾಡಿ 'ಅಪೂರ್ವ ಪಶ್ಚಿಮ' ಎಂಬ ಕೃತಿ ಬರೆದಿದ್ದರು. ಯುರೋಪ್ ಪ್ರವಾಸದಿಂದ ಮರಳುವಾಗ ಅವರು ಅಲ್ಲಿನ ಪ್ರಸಿದ್ಧ ಕಲಾವಿದರ ಚಿತ್ರಗಳ ಪ್ರತಿಯನ್ನು ಖರೀದಿಸಿ ತಂದಿದ್ದರು. ಆಮೇಲೆ ಬರೆದ 'ಕಲಾಪ್ರಪಂಚ' ಕೃತಿಯಲ್ಲಿ ವಿಶ್ವ ಕಲಾಪ್ರಕಾರಗಳ ವಿಮರ್ಶೆಯೇ ಇದೆ. 'ಪೇಂಟಿಂಗ್ಸ್ ಆಫ್ ಕರ್ನಾಟಕ' ಅಂತ ಬೇರೆಯೇ ಒಂದು ಪುಸ್ತಕ ಬರೆದರು.